# OPTIONAL KANNADA

## ಐಚ್ಛಿಕ ಕನ್ನಡ

## APRIL/MAY 2022

## SCHEME OF VALUATION

## Subject Code : 16 (N/S)

| | | |
|---|---|---|
| 1 | ಇಂದ್ರನಿಗೆ | 1 |
| 2 | ಕಿರಾತ ವೇಷಧಾರಿ | 1 |
| 3 | ಘಟ ಕಾಯಕ / ಮಡಕೆ ಮಾಡುವುದು | 1 |
| 4 | ಶಿವನನ್ನು ತನ್ನ ಹೃದಯದಲ್ಲಿ ಆಡಿಸುತ್ತಿರುವ ಭಕ್ತನಾರು? | 1 |
| 5 | ದೇವಾಲಯದೊಳಗೆ ಯಾರಾದರೂ ಮಾತನಾಡಿದರೆ ದೇಗುಲವೇ ಮಾತನಾಡಿದಂತೆ | 1 |
| 6 | ಕಬ್ಬಿಣ | 1 |
| 7 | ಮಾತಿನಿಂದ | 1 |
| 8 | ಪರಿಮಳ ಬೀರುತ್ತದೆ | 1 |
| 9 | ಯೋಗ್ಯವರನಿಗೆ ಕೊಟ್ಟ ಕುಲಪುತ್ರಿ | 1 |
| 10 | ಸಂಸಾರದ ಹಿರಿಮೆ ನಾಶವಾಗುತ್ತದೆ | 1 |
| 11 | ನಾಗಿ / ನಾಗವೇಣಿ | 1 |
| 12 | ಹಾಲಿಗಾಗಿ | 1 |
| 13 | ಎಡೆಬಿಡದೆ | 1 |
| 14 | ಮತವೆಂಬ ಮದಿರೆಯ | 1 |
| 15 | ಬಡವರೇ | 1 |
| | | |
| 16 | ಸೋಮವಂಶ ಲಲಾಮ ಸೋಮಪ್ರಭ ಹರಿವಂಶ ಅಗ್ರಗಣ್ಯ ಹರಿಕಾಂತ, ನಾಥವಂಶ ನಾಯಕ ಅಕಂಪನ, ಉಗ್ರವಂಶ ಅಗ್ರಗಣ್ಯ ಕಾಶ್ಯಪ | 2 |
| 17 | ಗುಂಡಯ್ಯನ ಹೃದಯದಲ್ಲಿ ಆಡುತ್ತಿದ್ದೆ–ಸುರನರಲೋಕದ ಭೇದವತೋರದೆ ಎರಡೂ ಕಡೆ ಇದ್ದೆ–ಸಂತೋಷದಿಂದ ಮೈಮರೆತಿದ್ದೆ ಎಂದು ಹೇಳುತ್ತಾನೆ | 2 |
| 18 | ಬಂದವರ–ಹೋದವರ ಬಗ್ಗೆ, ನಿಂದವರ–ನೆರೆದವರ ಬಗ್ಗೆ, ಊಟ–ನಿದ್ರೆಯ ಬಗ್ಗೆ | 2 |

| | | |
|---|---|---|
| | ಲಕ್ಷ್ಯವಿರಲಿಲ್ಲ. | |
| 19 | ಪರುಷ ಮುಟ್ಟಿದಾಗ ಕೀಳುಕಬ್ಬಿಣವೂ ಹೊನ್ನಾಗುತ್ತದೆ. ಮಾಯೆ ಹಳೆಯ ಹಂಚು, ಎಂದಿಗೂ ಬದಲಾಗುವುದಿಲ್ಲ | 2 |
| 20 | ಮನ ಬಂದ ಹೆಣ್ಣಿನೊಂದಿಗೆ ಮನಮುಟ್ಟುವಂತೆ ಸಂಸಾರ ನಡೆಸಿದಾಗ | 2 |
| 21 | ಉಡುಗೆ–ತೊಡುಗೆ | 2 |
| 22 | ಪಂಪ –ಪೊಸಯಿಸಿದಳಾಕೆ ನಾಟ್ಯಾಗಮಮಂ ಕಾವ್ಯಭಾಗ–ನರ್ತಿಸುತ್ತಿರುವಾಗಲೆ ನೀಲಾಂಜನೆ ಕಣ್ಮರೆ– ಇದನ್ನು ತಿಳಿದ ಆದಿದೇವನ ಮನದಲ್ಲಿ ದೇಹ ಅನಿತ್ಯ, ನಶ್ವರ ಎಂಬ ಅರಿವು ಉಂಟಾಗಿ– ಶರೀರ ವ್ಯಾಮೋಹವನ್ನು ತೊರೆಯಲು ಈ ಸಂದರ್ಭ ಕಾರಣವಾಗುತ್ತದೆ. | 3 |
| 23 | ಹರಿಹರ–ಆಡಿದನಾಡಿದನಾಹಾಶಂಕರ–ರಗಳೆ–ಕೈಲಾಸದ ಸಭೆಯಲ್ಲಿ ಶಿವನ ಅನ್ಯಮನಸ್ಕತೆಯನ್ನು ಪ್ರಶ್ನಿಸಿದ ಗಿರಿಜೆಗೆ ಶಿವ ತಾನು ಗುಂಡನ ಹೃದಯದಲ್ಲಿ ಕುಣಿಯುತ್ತಿದ್ದ ಎಂದದ್ದು–ಗಿರಿಜೆಗೆ ಅಚ್ಚರಿ ಮೂಡಿ ಮೇಲಿನಂತೆ ಪ್ರಶ್ನಿಸಿದ್ದು– ಆಕೆಯ ಕೌತುಕವನ್ನು ಕಾಣಬಹುದು | 3 |
| 24 | ಚಾಮರಸ–ಕಾಳುಮತಿಗಳಿಗೆನಿತು ಬುದ್ಧಿ ಹೇಳಿದರೆ ಫಲವೇನು? ಅಲ್ಲಮನು ಮಾಯೆಯ ಪ್ರೀತಿಯನ್ನು ನಿರಾಕರಿಸಿದಾಗ ಮಾಯೆ ಹಠದಿಂದ–ತನಗೆ ಸಾವು ಬಂದರೂ ನಿನ್ನ ಮೇಲಿನ ಪ್ರೀತಿಯನ್ನು ತೊರೆಯುವುದಿಲ್ಲ ಎಂದ ಸಂದರ್ಭ | 3 |
| 25 | ರೆ, ಚನ್ನಪ್ಪ ಉತ್ತಂಗಿ–ಸರ್ವಜ್ಞನ ವಚನಗಳು–ಹಸನಾಗಿ ದುಡಿದರೆ ಅಶನ–ವಸನಗಳು–ಊರ ಜನರನ್ನು ನೆಂಟರೆಂದು ಕೇರಿಯವರೆಲ್ಲಾ ಬಳಗವೆಂದು–ಭೂಮಿಯೇ ದೈವವೆಂದು ಭಾವಿಸಿದಾಗ ನಮ್ಮ ನಡುವೆ ಯಾವುದೇ ಮತಬೇಧ ಇರುವುದಿಲ್ಲ. | 3 |
| 26 | ಸಂಚಿಯ ಹೊನ್ನಮ್ಮ–ನೇಮದೊಳು ನೆಲೆಸುವುದು–ಯಾವ ಕುಟುಂಬವು ಹೆಣ್ಣನ್ನು ಗೌರವಾದರಗಳಿಂದ ನಡೆಸಿಕೊಳ್ಳುವುದೋ–ಆಕೆ ಸಂತೋಷದಿಂದ ಹರಸಿದಾಗ ಆ ಮನೆ ಉನ್ನತಿ ಹೊಂದುವುದು | 3 |
| 27 | ಪಂಪ–ಆದಿಪುರಾಣ–ಆದಿದೇವನ ವೈರಾಗ್ಯ ಸನ್ನಿವೇಶ– ರೋಚಕವಾದ ಘಟನೆ–ಆದಿದೇವನ ಪರಿನಿಷ್ಕ್ರಮಣ ಕಲ್ಯಾಣ ಸಮೀಪದಲ್ಲಿದೆ ಎಂಬುದನ್ನು ಅರಿತ ಇಂದ್ರ–ಆತನ ಸಂತೋಷಕ್ಕಾಗಿ ಅಮರ ನರ್ತಕಿ ನೀಲಾಂಜನೆಯ ನೃತ್ಯ ಏರ್ಪಡಿಸಿದ್ದು–ನೃತ್ಯ ಮಧ್ಯೆ ಆಯಸ್ಸು ಮುಗಿದು ಆಕೆ ಅದೃಶ್ಯಳಾದದ್ದು–ರಸಭಂಗ ಭಯದಿಂದ ಇಂದ್ರ ಪ್ರತಿ ನೀಲಾಂಜನೆಯನ್ನು ಸೃಷ್ಟಿಸಿ ನೃತ್ಯ | 4 |

| | | |
|---|---|---|
| | ಮುಂದುವರೆಸಿದ್ದು–ಆದಿದೇವನಿಗೆ ಈ ಘಟನೆ ಅರಿವಿಗೆ ಬಂದು ದೇಹದ ನಶ್ವರತೆಯ ಬಗ್ಗೆ ಅಚ್ಚರಿಗೊಂಡಿದ್ದು ದೇಹ ರೂಪ, ವಿಭವ, ಯೌವ್ವನ ಸಂಪತ್ತು, ಸೌಭಾಗ್ಯ, ಆಯಸ್ಸು ಇವು ಮಿಂಚಿನ ಹೊಳಪು, ಮೊಡದ ನೆರಳು, ಕಾಮನ ಬಿಲ್ಲಿಗೆ ಸಮ ಎಂದು ಭಾಸವಾಗಿ, ಸಂಸಾರ ಸುಖವು ನೀರ ಮೇಲಿನ ಗುಳ್ಳೆ ಎಂಬ ಅರಿವು ಮೂಡಿದ್ದು – ಮನುಷ್ಯರು ಚಿಂತೆ ಶೋಕ, ವಿಷಾದ, ಭ್ರಾಂತಿಗಳಿಂದ ಉಂಟಾದ ದುಃಖದಿಂದ ನಿರಂತರವಾಗಿ ನರಳುತ್ತಿರುತ್ತಾರೆ–ವಿಷಯವೆಂಬ ಬೆಂಕಿಗೆ ಸಿಲುಕಿ ತೋಳಲಾಡುತ್ತಿದ್ದಾರೆ ಎಂದು ಅರಿತು ಸಂಸಾರ–ಶರೀರ ಭೋಗದ ಬಗ್ಗೆ ವಿರಕ್ತನಾಗಿ, ಮುಕ್ತಿಕಾಂತೆಯಲ್ಲಿ ಅನುರಕ್ತನಾಗುತ್ತಾನೆ. | |
| 28 | ತನ್ನೆದುರು ನಿಂತ ಕಿರಾತನು ಸಾಕ್ಷಾತ್ ಶಿವ ಎಂಬುದು ಅರ್ಜುನನಿಗೆ ಅರಿವಾದಾಗ ಅವನ ಹೃದಯದಲ್ಲಿ ಆವರಿಸಿದ್ದ ಗರ್ವ ಮಾಯ ರೋಮಾಂಚನವಾಯಿತು – ಬೆವರು ಹೊಮ್ಮಿ, ಯುದ್ಧದ ಬಯಕೆ ದೂರಾಗು ಕುತೂಹಲ ಹೆಚ್ಚಾಗಿ, ಉತ್ಸಾಹ ದೇಹವನ್ನು ವ್ಯಾಪಿಸಿದ್ದು, ಭೀತಿ ಕೋಪ ಮನಸ್ಸಿನಿಂದ ದೂರವಾಗಿ ಭಕ್ತಿ ಹೆಚ್ಚಾಯಿತು. ಪರಿಪೂರ್ಣನೂ, ಮೋಕ್ಷದಾಯಕನೂ, ಸರ್ವೋತ್ತಮನಾದ ಶಿವನೊಡನೆ ಹೋರಾಡಿದೆ ಎಂಬ ಪಶ್ಚಾತ್ತಾಪ ಉಂಟಾಯಿತು. ಸಾಮಾನ್ಯ ಬೇಡನೆಂದು ಭಾವಿಸಿ ಶಿವನೊಡನೆ ಹೋರಾಡಿದೆ, ತನ್ನನ್ನು ಕಾಪಾಡಲು ಶಿವನ ವೇಷಮರೆಸಿ ಬಂದರೆ ಅರಿಯದಾದೆ–ಸೌಜನ್ಯದಿಂದ ನಡೆದುಕೊಳ್ಳಲಿಲ್ಲ–ನನ್ನಂತ ಮೂರ್ಖ ಬೇರೆ ಯಾರೂ ಇರಲು ಸಾಧ್ಯವಿಲ್ಲ ಎಂದು ವ್ಯಥೆಪಟ್ಟ | 4 |
| 29 | ಕಾಯಕದಿಂದ ಶಿವನನ್ನು ಒಲಿಸಿಕೊಂಡ ಭಕ್ತ ಗುಂಡಯ್ಯ ಬಹಿರಂಗದಲ್ಲಿ ಘಟಕಾಯಕ–ಅಂತರಂಗದಲ್ಲಿ ಶಿವನ ಆರಾಧಿಸುತ್ತಾ–ಕಾಯಕದ ಮೂಲಕ ಶಿವನನ್ನು ಪೂಜಿಸುತ್ತಿದ್ದ–ಎಂದಿನಂತೆ ಒಮ್ಮೆ ನಾಗಾಭರಣನ ಆಲಯಕ್ಕೆ ಭೇಟಿ–ನಾನಾವಿಧದ ಪೂಜೆಗಳಿಂದ ಸಿಂಗಾರಗೊಂಡ ಶಿವಲಿಂಗನನ್ನು ಕಂಡು ಅಚ್ಚರಿಗೊಂಡು –ಕಣ್ಣು ಮನಗಳಲ್ಲಿ ಪೂಜಾಭಾವ ತುಂಬಿಕೊಂಡು– ಮನೆಗೆ ಬಂದು ಕಾಯಕ ನಿರತನಾಗುತ್ತಾನೆ. ಮನದಲ್ಲಿ ನಾನಾ ವಿಧಧ ಪೂಜೆಗಳಿಗೆ ಶಿವನು ನಲಿದಾಡಿದಂತೆ ಭಾಸವಾಗಿ ಮಡಕೆಗಳನ್ನೆ ವಾದ್ಯಗಳನ್ನಾಗಿಸಿ ಬಾರಿಸತೊಡಗುತ್ತಾನೆ–ತಾಳಕ್ಕೆ ತಾನು ಕುಣಿಯುತ್ತಾ, ಅಂತರಂಗದಲ್ಲಿ ಶಿವನನ್ನು ಕುಣಿಸತೊಡಗುತ್ತಾನೆ. | 4 |
| 30 | ಅಲ್ಲಮನ ಮೇಲೆ ಉಂಟಾದ ಪ್ರೀತಿಯನ್ನು ನಿವೇದಿಸಲು ಮಾಯೆಯು ತನ್ನ ಗೆಳತಿ ವಿಮಳೆಯನ್ನು ಆತನ ಬಳಿಗೆ ಕಳುಹಿಸುತ್ತಾಳೆ–ಅಲ್ಲಮ ವಿಮಳೆ ಇವರ ನಡುವಿನ ಸಂಭಾಷಣೆ | 4 |

| | | |
|---|---|---|
| | ಸ್ವಾರಸ್ಯದಿಂದ ಕೂಡಿದೆ. ವಿಮಳೆಯು ಅಲ್ಲಮನ ಬಳಿ ಮಾಯೆಗೆ ಒಲಿಯಬೇಕೆಂದು ವಿನಯದಿಂದ ಪ್ರಾರ್ಥಿಸಿ, ತನು–ಮನಗಳಲ್ಲಿ ಅಲ್ಲಮನನ್ನು ತುಂಬಿಕೊಂಡಿರುವ ಮಾಯೆಯನ್ನು ಕರುಣೆಯಿಂದ ರಕ್ಷಿಸಬೇಕು ಎಂದು ಬೇಡಿಕೊಂಡದ್ದು–ಅಲ್ಲಮನು ನೀರಿಗೆ ಹೆಪ್ಪೆರೆದರೆ ಮೋಸರಾಗದು ಅಂತೆಯೇ ಕಾಳುಮತಿಗಳಿಗೆ ಬುದ್ಧಿಯಹೇಳಿದರೆ ಪ್ರಯೋಜನವಿಲ್ಲ ಎಂದು ವಾದಿಸುತ್ತಾನೆ. ವಿಮಳೆ ಪಟ್ಟುಬಿಡದೆ ಸ್ಪರ್ಷಮಣಿಯಂತಹ ಗಂಡಸು ಕೀಳುಕಬ್ಬಿಣದಂತಹ ಹೆಣ್ಣನ್ನು ಕಾಲಲ್ಲಿ ಒದೆಯಲಿ, ತೋಳಲ್ಲಿ ಅಪ್ಪಿಕೊಳ್ಳಲಿ ಆಕೆ ಚಿನ್ನವಾಗುತ್ತಾಳೆ ಎಂದಾಗ ಅಲ್ಲಮನು ಸ್ಪರ್ಷಮಣಿಯಿಂದ ಕಬ್ಬಿಣ ಹೊನ್ನಾಗುತ್ತದೆ. ಹಳೆಯ ಹಂಚು ಬದಲಾಗದು ಎಂದ ಮಾತಿಗೆ ವಿಮಳೆಯಲ್ಲಿ ನೀವು ಕೃಪೆತೋರಿದರೆ ಮಾಯೆಗೆ ಒಳಿತಾಗುವುದು. ಇದರಿಂದ ನಿಮ್ಮ ಘನತೆಗೆ ಯಾವ ಕುಂದು ಬರುವುದಿಲ್ಲ ಎಂದು ನುಡಿದಾಗ– ಬಿತ್ತಿದ ಬೀಜ ಒಂದು ಬಯಸಿದ ಫಲ ಬೇರೊಂದು, ಇದು ಸಾಧ್ಯವೇ? ಎಂದು ವಿಮಳೆಯ ತರ್ಕವನ್ನು ಖಂಡಿಸಿ, ಮೆಯೆಯ ಪ್ರೀತಿಯನ್ನು ತಿರಸ್ಕರಿಸುತ್ತಾನೆ. | |
| 31 | ಸಮಾಜದ ಒಳಿತಿಗಾಗಿ ಸಾರುವ ನೀತಿಯೇ ಲೋಕನೀತಿ ಸರ್ವಜ್ಞನ ವಚನಗಳು ನೀತಿ ಪ್ರಧಾನವಾಗಿವೆ – ಅಂತೆಯೇ ಆತನನ್ನು ಸಮಾಜ ಚಿಕಿತ್ಸಕ ಎನ್ನುವರುಅವನ ಪ್ರಕಾರ ಲೋಭಿತನದಿಂದ ಯಾವ ಲಾಭವೂ ಇಲ್ಲ, ಕುಡುಕನ ಬದುಕು ಹಂದಿಗಿಂತಲೂ ಕಡೆ, ಭಂಗಿ ಚಟಕ್ಕೆ ಬಲಿಯಾದವನು ಮಂಗನಂತೆ ಚಂಚಲ ಚಿತ್ತನಾಗಿರುತ್ತಾನೆ ಎಂದು ಹೇಳಿದ್ದಾನೆ. ಭಗವಂತ ಸರ್ವಾಂತರ್ಯಾಮಿ ಎಲ್ಲರ ಮನದಲಿದ್ದಾನೆ–ಪರರ ವಸ್ತುಗಳನ್ನು ಅಪಹರಿಸುವವನು ನಿತ್ಯ ಹೊಲೆಯ, ಸಾಲ ಕೊಡುವವನು ಹಾವು, ಹದ್ದು ನಾಯಿ ಗೊದ್ದದಂತೆ–ಕಚ್ಚೆ ಕೈ ಬಾಯಿಗಳು ಶುದ್ಧವಾಗಿರಬೇಕು ಊರಿನವರೆಲ್ಲಾ ನೆಂಟರು, ಕೇರಿಯ ಬಳಗ, ಭೂಮಿಯೇ ದೈವ ಎಂದು ಭಾವಿಸಿದಾಗ ನಮ್ಮ ನಡುವೆ ಮತಬೇಧ ಇರುವುದಿಲ್ಲ. ಯೋಗ್ಯರಿಗೆ ದಾನ ನೀಡಬೇಕು ಸಂಸಾರದಲ್ಲಿ ಹೊಂದಾಣಿಕೆ ಇರಬೇಕು ಇತ್ಯಾದಿ ಲೋಕನೀತಿಗಳು ಸರ್ವಜ್ಞನ ವಚನಗಳಲ್ಲಿವೆ. | 4 |
| 32 | ಷಡಕ್ಷರ ದೇವ– ಸೌಜನ್ಯ ವಿದೂರನಾದೆನ್–ಶಿವನಿಂದ ಪಾಶುಪತಾಸ್ತ್ರ ಪಡೆಯಲು ಅರ್ಜುನ ತಪಸ್ಸು ಕೈಗೊಂಡದ್ದು ಭಕ್ತಿ ಪರೀಕ್ಷೆಗಾಗಿ ಶಿವ ಕಿರಾತ ವೇಷ ಧರಿಸಿ, ಬೇಟೆಗಾರರೊಂದಿಗೆ ಹಂದಿಯನ್ನು ಘಾಸಿಗೊಳಿಸಿ ಅಟ್ಟಿಸಿಕೊಂಡು ಬಂದದ್ದು – ತಪೋಭಂಗಿತನಾದ ಅರ್ಜುನ– ಕ್ಷಾತ್ರಧರ್ಮ ನೆನೆದು ಹಂದಿಗೆ ಬಾಣ ಪ್ರಯೋಗಿಸುತ್ತಾ ಆರ್ಭಟಿಸಿದ್ದು ಆ ಬಾಣ ಹಂದಿಯ | 4 |

| | | |
|---|---|---|
| | ಮರ್ಮಸ್ಥಾನಕ್ಕೆ ನಾಟಿ ಕುತ್ತಿಗೆ ಕೆಳಗಾಗಿ ಸತ್ತು ಬಿದ್ದ ಸನ್ನಿವೇಶದ ವರ್ಣನೆ | |
| 33 | ಚಿಕ್ಕುಪಾಧ್ಯಾಯ–ಕೊಲ್ಲುವುದು ಧರ್ಮವೆ, ಕಳುವುದು ನೀತಿಯೇ ಸಾಂಗತ್ಯ ಪದ್ಯ– ಆಪತ್ತಿನಲ್ಲಿ ಧೈರ್ಯಗುಂದಬಾರದು ಸಿರಿತನ ಬಂದಾಗ ಕ್ಷಮಾ ಗುಣವೂ ಇರಬೇಕು ಕೋಪ ಬಂದಾಗಲೂ ವಿವೇಕ ಕಳೆದುಕೊಳ್ಳಬಾರದು ಎಂದು ಮನುಷ್ಯನ ಗುಣವನ್ನು ವಿವರಿಸಿದ್ದಾನೆ. | 4 |
| 34 | ಹಸಿರು ಸೀರೆ– ಬಣ್ಣದ ರವಕೆ ತೊಟ್ಟ ನಾಗಿ ಹಾಲು ಹಿಂಡಲೆಂದು ವಯ್ಯಾರದಿಂದ ನಡೆದು ಬರುವುದನ್ನು ಕಂಡು | 2 |
| 35 | ಜಾತ್ರೆಗೆ ಹೊರಟಿದ್ದ ನಾಗಿ ಮತ್ತು ಅವಳ ತಾಯಿ ಕೆರೆಯ ಅಂಚಿನ ನೆರಳ ದಾರಿಯಲ್ಲಿ ಬೆಕ್ಕಿನ ಕರುಳು ಕರಗುವಂತಹ ಮಿಯಾವ್ ಎಂಬ ಧ್ವನಿ ಆಲಿಸಿದರು. | 2 |
| 36 | ಕಾಣದಾದ ಮಗಳನ್ನು ಅಲ್ಲಿ–ಇಲ್ಲಿ ಹುಡುಕುತ್ತಾ ಅವಳ ತಾಯಿ ನಾಗಿ ಎಂದು ಕೂಗುತ್ತಿದ್ದಳು ತಂದೆ ಮಂಜುಗೌಡ ಒಳಗುದಿ ಹೊತ್ತು ಮಗಳ ಹುಡುಕಿ ಊರು ಕೇರಿ ಅಲೆದಾಡಿದ | 2 |
| 37 | ಸು.ರಂ. ಎಕ್ಕುಂಡಿ – ನಾಗಿಯ ಕಥೆ–ಮಂಜುಗೌಡನ ಮಗಳು ನಾಗಿ ಹರೆಯಕ್ಕೆ ಕಾಲಿಡುತ್ತಿದ್ದಂತೆ ಅವಳ ಚೆಲುವು ಇಮ್ಮಡಿಸಿತು ನೀರು ತರಲೆಂದು ಕೊಡ ಹಿಡಿದು ಹಳ್ಳಕ್ಕೆ ಇಳಿದರೆ–ಕೊಡಕ್ಕೆ ನೀರು ತುಂಬುತ್ತಿರಲಿಲ್ಲ. ನೀರು ಅವಳ ಚೆಲುವನ್ನು ಕಂಡು ಈ ಮಾತನ್ನು ಹೇಳಿದೆ. ನೀರಿನಲ್ಲಿ ತನ್ನ ಪ್ರತಿಬಿಂಬ ಕಂಡು ಚಿತ್ತ ಚಾಂಚಲ್ಯದಿಂದ ಸ್ವಮೋಹಕ್ಕೆ ಒಳಗಾಗಿರುವುದನ್ನು ವರ್ಣಿಸುವ ಸಂದರ್ಭ | 3 |
| 38 | ಸು.ರಂ. ಎಕ್ಕುಂಡಿ–ನಾಗಿಯಕಥೆ–ತಾಯಿಯೊಡನೆ ಜಾತ್ರೆಗೆ ಹೋಗಿದ್ದ ನಾಗಿ, ಚಿಗುರುಮೀಸೆ, ಎಳೆಯ ನಗೆಯ ರೂಪವಂತನಾದ ಸೀರೆ ಮಾರುವವನು ಕಾಣುತ್ತಿದ್ದಂತೆ ಇಬ್ಬರ ಕಣ್ಣುಗಳು ಸೇರಿ ಒಮ್ಮೆಲೆ ಮಿಂಚನ್ನು ಹರಿಸುತ್ತವೆ. ಹೃದಯಗಳು ಮಾತಾಡಿಕೊಳ್ಳುತ್ತವೆ. ನಾಗಿಯ ಪರಂಪರಾಗತ ಭಯ, ತಾಯಿಯ ಎಚ್ಚರಿಕೆಯ ಮಾತುಗಳನ್ನು ಮೀರಿ–ಸೀರೆಯವನ ಮೋಹಕ್ಕೆ ಒಳಗಾಗುವುದನ್ನು ವರ್ಣಿಸುವ ಸನ್ನಿವೇಶ. | 3 |
| 39 | ಸು.ರಂ. ಎಕ್ಕುಂಡಿ–ನಾಗಿಯ ಕಥೆ–ಮುಗ್ದೆ ನಾಗಿಯ ಯೌವ್ವನದ ಆವೇಶದಲ್ಲಿ ಭವಿಷ್ಯದ ಕಲ್ಪನೆ ಇಲ್ಲದೆ– ಸೀರೆಯವನ ಕಪಟವನ್ನರಿಯದೆ ಪ್ರೀತಿಸಿ ಮೋಸಹೋಗುತ್ತಾಳೆ. ಹೆತ್ತವರು– ಪ್ರಿಯತಮ ಇವರ ನಡುವಿನ ಹೊಯ್ದಾಟದಲ್ಲಿ ದಾರಿ ಕಾಣದಾಗುತ್ತಾಳೆ. ಪುರುಷ ದೌರ್ಜನ್ಯದ ಗಾಳಿಕೆ ಸಿಕ್ಕ ಬಾಳಬೆಳಕು ಆರಿಹೋಗುವ ಸನ್ನಿವೇಶ. | 3 |

| | | |
|---|---|---|
| 40 | ಸು.ರಂ. ಎಕ್ಕುಂಡಿ–ನಾಯಿಯ ಕಥೆ – ಪ್ರಕೃತಿ ವರ್ಣನೆ– ಊರಿನ ಅನತಿ ದೂರದಲ್ಲಿ ನೀಲಾಕಾಶಕ್ಕೆ ಮುಟ್ಟುವಂತಹ ಬೆಟ್ಟಗಳು, ನೀರವ ಕಣಿವೆ–ಊರುಸುತ್ತ ಗದ್ದೆಯಲ್ಲಿ ಹಸುರಿನಿಂದ ಕಂಗೊಳಿಸುತ್ತಾ ತೂಗಾಡುತ್ತಿರುವ ತೆನೆಗಳು, ಬಳುಕಿ ಬಾಗಿದ ಕಾಡನಡುವಿನ ಹಾದಿ–ಊರ ಅಂಚಿನಲ್ಲಿ ತೆಂಗು–ಅಡಕೆಯ ತೋಟ– ಮುಗಿಲು ಹರಿದ ಹಾಗೆ ಸುರಿವ ಮಳೆ – ಸಾಲ ಸೋಲಿನಲ್ಲಿ ಬದುಕುತ್ತಿರುವ ಜನರ ಚಿತ್ರಣ. | 4 |
| 41 | ಊರ ಜಾತ್ರೆಯ ದಿನ– ನಾಗಿ ಮಿಂದು, ಹಸಿರು ಸೀರೆ ಬಣ್ಣದ ರವಕೆ ತೊಟ್ಟು, ತೇರಿಗೆ ಹೋಗಲು ಆಸೆಪಟ್ಟು ತಾಯಿಯೊಂದಿಗೆ ಹೊರಟಿದ್ದು ದಾರಿಯಲ್ಲಿ ಕೊಕ್ಕರೆಗಳು ಕೆರೆಯ ನೀರಿಗೆ ಇಳಿಯುತ್ತಿದ್ದುದು– ಹಕ್ಕಿಗಳೆರಡು ಚುಂಚಿನಲ್ಲಿ ಚುಂಚನಿರಿಸಿ ಆಡುತ್ತಿದ್ದುದು ನೆರಳ ದಾರಿಯ ಆಚೆ ಈಚೆ ಹಸಿದ ಕಣ್ಣುಗಳ ನೋಟ ದಾರಿಯಲ್ಲಿ ಮುದ್ದಾದ ಬಿಳಿಬೆಕ್ಕು– ಈ ದೃಶ್ಯಗಳ ಮೂಲಕ ನಾಗಿಯಲ್ಲಿ ಪ್ರೀತಿ ಉದ್ದೀಪನಗೊಂಡ ಬಗೆಯನ್ನು ಕವಿ ವರ್ಣಿಸಿದ್ದಾರೆ. ಜಾತ್ರೆಯ ಜನರ ನಡುವೆ ಸೀರೆ ಮಾರುವ ಹುಡುಗನನ್ನು ಕಂಡು ಅವನ ಪ್ರೀತಿಯ ಸೆಳೆತಕ್ಕೆ ಸಿಕ್ಕಿದ ಸನ್ನಿವೇಶ. | 4 |
| 42 | ಸು.ರಂ. ಎಕ್ಕುಂಡಿ – ನಾಗಿಯ ಕಥೆ– ದುರಂತ ಕಥನ ಕವನದ ನಾಯಕಿ ನಾಗಿ– ಮಂಜುಗೌಡನ ಒಬ್ಬಳೆ ಮಗಳು–ಕನಸುಗಂಗಳ ಮಲ್ಲಿಗೆ ನಗೆಯ ಮುಗ್ದೆ – ಕಾಲ ಸವೆದಂತೆ ಪ್ರಾಯಕ್ಕೆ ಕಾಲಿಟ್ಟ ನಾಗಿ– ಚೆಲುವು ಇಮ್ಮಡಿಸಿದ್ದು– ಊರ ಜಾತ್ರೆಯಲ್ಲಿ ಸೀರೆಯವನಿಗೆ ಮನಸೋತು ಪ್ರೀತಿಯ ಬಲೆಗೆ ಸಿಲುಕಿದ್ದು– ಕತ್ತಲಲ್ಲಿ ಎಡವದಂತೆ ದೀಪಹಚ್ಚಿಡು ಎಂಬ ತಾಯಿಯ ಎಚ್ಚರಿಕೆಯ ಮಾತು ದಾಟಿ ನಿಲ್ಲುವ ನಾಗಿ – ಚಿತ್ತಚಾಂಚಲ್ಯಕ್ಕೆ ಒಳಗಾಗಿ ಬಣ್ಣದ ಬದುಕಿಗೆ ತನ್ನನ್ನು ಒಪ್ಪಿಸಿಕೊಂಡದ್ದು ಹಾಲಿಗಾಗಿ ಕಾದಿದ್ದ ಬೆಕ್ಕು ತನ್ನ ಕಾರ್ಯ ಸಾಧಿಸಿ ಕಣ್ಮರೆಯಾಗು ಪ್ರೀತಿಯನ್ನು ಹುಡುಕಿ ಹೊರಟನಾಗಿ ಕಾಣದಾಗುತ್ತಾಳೆ. ತಂದೆ ತಾಯಿ ಒಳಗುದಿ ಹೊತ್ತು ನಾಗಿಗಾಗಿ ಹುಡುಕುತ್ತಾರೆ ನಾಗಿ ಏನಾದಳು? ಎಂಬ ನಿಗೂಢತೆಯೊಂದಿಗೆ ಮುಕ್ತಾಯವಾದ ಈ ಕವನದ ನಾಯಕಿ ನಾಗಿಯದು ದುರಂತ ಕಥೆ. | 4 |
| 43 | ಕೆರೆ–ತೊರೆಗಳು | 2 |
| 44 | ಪೂರ್ವಿಕರ ಮೂಢತನಕ್ಕೆ ಆದಿ– ಅಂತ್ಯವೆಂಬುದಿಲ್ಲ ದೇವರು ಎಲ್ಲಾ ಕಡೆ ಇದ್ದಾನೆಂದು ಹೇಳಿ ಗುಡಿಯಲ್ಲಿ ಅರಸುತ್ತಾರೆ. ನಿರಾಕಾರ ಎಂದು ಹೇಳಿ ಮೂರ್ತಿ ಪೂಜೆ ಮಾಡುತ್ತಾರೆ. ಎಲ್ಲರಲ್ಲೂ ಭಗವಂತನಿದ್ದಾನೆ ಎಂದು ಹೇಳಿ ಹೊಲೆಯನನ್ನು ದೂರವಿಡುತ್ತಾರೆ. ನಡೆ–ನುಡಿಗೆ | 2 |

| | | |
|---|---|---|
| | ಸಂಬಂಧವಿಲ್ಲದಿರುವ ನಡವಳಿಕೆಯೇ ಭಾರತಾಂಬೆಯ ದುರ್ಗತಿಗೆ ಕಾರಣ. | |
| 45 | ಪಾಪಿಗಳ ಮತ್ತು ಭೋಗಿಗಳ ಗೂಡುಗಳು | 2 |
| 46 | ಜಲಗಾರ ಊರತೋಟಿ–ಶಿವ ಜಗದ ತೋಟಿ | 2 |
| 47 | ಕುವೆಂಪು– ಜಲಗಾರ ನಾಟಕ– ರೈತ ತನ್ನಲ್ಲಿ ಹೇಳಿಕೊಂಡ ಮಾತು ಶಿವಗುಡಿಯ ಜಾತ್ರೆಗೆ ಹೊರಟ್ಟಿದ್ದ ರೈತ–ಜಲಗಾರನನ್ನು ಜಾತ್ರೆಗೆ ಬಂದು ನಲಿಯುವಂತೆ ಒತ್ತಾಯಿಸುತ್ತಾನೆ. ಒಪ್ಪದ ಜಲಗಾರ ತನ್ನ ಕಾಯಕ ಮುಂದುವರೆಸಿದಾಗ ರೈತ ಅಲ್ಲಿಂದ ಹೊರಟು ಇವನಿಗೆ ಸುಖದ ಪರಿಚಯವೇ ಇಲ್ಲ ದೇವರೆಂಬುದನರಿಯ ಪೂಜೆಯೆಂಬುದನರಿಯ– ಹುಟ್ಟುಗುಣ ಸುಟ್ಟರೂ ಹೋಗುವುದೇ? ಎಂದು ತನ್ನಲ್ಲಿ ಹೇಳಿಕೊಳ್ಳುತ್ತಾನೆ. | 3 |
| 48 | ಕುವೆಂಪು– ಜಲಗಾರ– ತಿರುಕನನ್ನು ಉದ್ದೇಶಿಸಿ ಜಲಗಾರ ಹೇಳಿದ ಮಾತು–ತರುಣನ ದೌರ್ಜನ್ಯಕ್ಕೆ ಒಳಗಾದ ತಿರುಕನನ್ನು ಜಲಗಾರ ಸಂತೈಸಿ, ಏನು ಬೇಕಾಗಿದೆ ಎಂದು ಕೇಳಿದ್ದು–ಅದಕ್ಕೆ ತಿರುಕನು ಹಸಿವಿನಿಂದ ಸಂಕಟ ಪಡುತ್ತಿದ್ದೇನೆ– ತುತ್ತು ಅನ್ನ ನೀಡುವಂತೆ ಕೆಳುತ್ತಾನೆ. ಆಗ ಜಲಗಾರ ಬಡವರಿಗೆ ಬಡವರಲ್ಲದೆ ಬೇರೆ ಗತಿ ಇಲ್ಲ ಎಂದು ಸಹಾಯಕ್ಕೆ ಬರುತ್ತಾನೆ. | 3 |
| 49 | ಕುವೆಂಪು–ಜಲಗಾರ–ವೇಷಧಾರಿ ಶಿವನು ಜಲಗಾರನಿಗೆ ಹೇಳಿದ ಮಾತು– ಜಲಗಾರನ ಪ್ರಾರ್ಥನೆಯಂತೆ ಶಿವ ಜಗದ ಜಲಗಾರನ ರೂಪದಲ್ಲಿ ಪ್ರತ್ಯಕ್ಷನಾದಾಗ ಊರ ಜಲಗಾರ ಭಯದಿಂದ ಯಾರು ನೀನು? ರಂದು ಪ್ರಶ್ನಿಸಿದ್ದು– ಶಿವನು ಸಹೋದರನೇ ಅಂ ಜದಿರು ಎಂದು ಅಭಯ ನೀಡುವ ಸಂದರ್ಭ | 3 |
| 50 | ಭೂದೇವಿಯು ತನ್ನ ಗೆಳತಿ ಉಷೆಯ– ಕೆಂಪಿನ ಮುತ್ತಿನ ಮೊಲೆ ಹಿಡಿದು ಮಬ್ಬಿನ ಮಂಜಿನ ಮುಸುಕನ್ನು ಎತ್ತಿ–ಉದಯಾಚಲವನ್ನು ಹತ್ತಿ ಹರಿಸಿನ ಬನಗಳ ಮುದ್ದಿಸಿ, ಗಿರಿಶೃಂಗಗಳ ಅಲಂಕರಿಸಿ, ಹಕ್ಕಿಗಳನ್ನು ಎಚ್ಚರಿಸುತ್ತಾ, ತಂಗಾಳಿಯನ್ನು ಹರಡುತ್ತಾ ಬರಬೇಕು ಎಂದು ಸ್ವಾಗತಿಸುತ್ತಿದ್ದಾಳೆ. ಮಂಜಿನ ಜಪಮಣಿ ಮಾಲೆ ಹಿಡಿದು ವನಸುಮಗಳನ್ನು ಮುಡಿದು, ಹೂಗಳ ಕೆಂಪಿನ ಕುಂಕುಮವಿಟ್ಟು ತಳಿರಿನ ಸೊಬಗಿನ ಸೀರೆಯನ್ನುಟ್ಟು, ಪೈರಿನ ರಮಣೀಯ ತೆ ತೊಟ್ಟು, ಮುಗಿಲಿನ ಕುರುಳನ್ನು ತೇಲಲು ಬಿಟ್ಟು, ಹೂಗಳ ಸೊಬಗನ್ನು ಕೊಯ್ದು ವಿಶ್ವದ ಗರ್ಭದ ಚೆಲುವನ್ನು ಹೊಯ್ದು, ಮಾಯಾ ಮೋಹದ ಜಾಲವ ನೆಯ್ದು, ತರಳಿನ ಹೂಗಳ ಸೇತುವೆ ಮಾಡಿ, ನಲಿನಲಿದಾಡುತ್ತಾ ಆಗಮಿಸಬೇಕೆಂದು ಭೂದೇವಿಯು ಹಾಡುತ್ತಾಳೆ. | 4 |

| | | |
|---|---|---|
| 51 | ಚಂದ್ರ, ಗಂಗೆ, ಹಾವು, ಉರಿಗಣ್ಣು, ಇವು ಶಿವನ ಆಭರಣಗಳು ಶಿವನು ಜಲಗಾರನಿಗೆ ವಿವರಿಸುವಂತೆ, ಆತ ಶಾಸ್ತ್ರಿಗಳ ಕಣ್ಣಿಗೆ ಕುರೂಪಿಯಾಗಿದ್ದನಂತೆ, ಚೆಲುವಂತಾ ಚಂದಿರನನ್ನು ಶಿವನಿಗೆ ಒಡವೆ ಮಾಡಿಸಿದರಂತೆ, ಅಸ್ಪೃಶ್ಯನಾಗಿದ್ದ ಶಿವನ ಅಸ್ಪೃಶ್ಯತೆಯನ್ನು ಸುಟ್ಟು ಶುಚಿ ಮಾಡಲು ಹಣೆಗಟ್ಟು ಮುಡಿಸಿದರಂತೆ, ಶಿವನಿಗೆ ರೌದ್ರತೆಯನ್ನು ಮೂಡಿಸಲು ಕೊರಳಿಗೆ ಉರಗಗಳಂತೆ ಸುತ್ತಿದರಂತೆ ಇದರ ಜೊತೆಗೆ ಜನಿವಾರ ತೊಡಿಸಿ, ಮೈಗೆ ಬೂದಿಯನ್ನು ಬಳಿದರಂತೆ | 4 |
| 52 | ಕುವೆಂಪು ಅವರ ಜಲಗಾರ ನಾಟಕವು ಕಾಯಕ ತತ್ವವನ್ನು ಪ್ರತಿಪಾದಿಸಿರುವ ವೈಚಾರಿಕ ನಾಟಕ. ಇಲ್ಲಿ ರೈತ ಮತ್ತು ಜಲಗಾರ ಇಬ್ಬರು ಕಾಯಕ ನಿಷ್ಟರು. ರೈತ ದುಡಿದು ಜಗಕೆ ಅನ್ನದಾತನಾದರೆ ಜಲಗಾರ ಕಾಯಕದಲ್ಲಿ ದೈವವನ್ನು ಕಾಣುವ ಭಕ್ತನಾಗಿದ್ದಾನೆ. ಶ್ರಮಿಕರನ್ನು ಎಲ್ಲರೂ ನಿರ್ಲಕ್ಷಿಸಿರುವಾಗ, ಜಗದ ಸೃಷ್ಟಿಕರ್ತ ಎನಿಸಿಕೊಂಡ ಶಿವ ಶ್ರಮಜೀವಿಗಳ ಬಗ್ಗೆ ಅಪಾರವಾದ ಗೌರವ ಹೊಂದಿದವನಾಗಿದ್ದಾನೆ. ಕಾಯಕವೇ ಕೈಲಾಸ, ವೃತ್ತಿಯ ಆದಾಧನೆಯೆ ಪರಮನ ಆರಾಧನೆ ಎಂಬ ಕಾಯಕ ತತ್ವ ನಿಷ್ಟೆಗಳನ್ನು ಈ ನಾಟಕವು ಅತ್ಯಂತ ಪರಿಣಾಮಕಾರಿಯಾಗಿ ಮೂಡಿಸಿದೆ. | 4 |
| 53 | ಚಂಪೂ ಹಳಗನ್ನಡ ಕಾವ್ಯರೂಪ – ಬರೆಯುವ ಶೈಲಿ– ವಸ್ತುಕ, ಮಾರ್ಗ, ಓದುಗಬ್ಬ ಗದ್ಯ–ಪದ್ಯ ಬೆರತು ಬರುವ ಕಾವ್ಯ ಶೈಲಿ. ಸುಂದರ ಮನೋಹರ ಎಂಬ ಅರ್ಥ. ಸಂಸ್ಕೃತದಲ್ಲಿ ಮೊದಲು ಕಂಡುಬಂದರೂ ಕನ್ನಡದಲ್ಲಿ ಪರಾಕಾಷ್ಟೆ ಶ್ರೇಷ್ಟ ಕೃತಿಗಳು ಕನ್ನಡದಲ್ಲಿ ರಚನೆಯಾಗಿವೆ. ಪಂಪರನ್ನ, ಪೊನ್ನ ನಾಗಚಂದ್ರ, ನಾಗವರ್ಮ ಮುಂತಾದವರು ಪ್ರಸಿದ್ಧರು. ಇವರ ಚಂಪೂ ಕೃತಿಗಳು ಶ್ರೇಷ್ಟ ಕಾವ್ಯಗಳೆನಿಸಿವೆ. | 2 |
| 54 | ಮಾಯೆ : ಚಾಮರಸನ ಪ್ರಭುಲಿಂಗಲೀಲೆಯ ಪ್ರಧಾನ ಪಾತ್ರ. ಬನವಾಸಿಯ ಮಮಕಾರ–ಮೋಹಿನಿಯರ ಮಗಳು, ಪಾರ್ವತಿಯ ತಾಮಸ ಕಳೆಯಿಂದ ಜನಿಸಿದವಳು. ಅಲ್ಲಮನನ್ನು ಪ್ರೀತಿಸಿ, ಅವನಿಂದ ನಿರಾಕರಣೆಗೆ ಒಳಗಾದ ಹೆಣ್ಣು. | 2 |
| 55 | ಸರ್ವಜ್ಞ : ತ್ರಿಪದಿಯ ಪ್ರಾತಿನಿಧಿಕ ಕವಿ ಅಬ್ಬಲೂರಿನ ಬಸವರಸ–ಕಂಬಾರ ಮಾಳಿಯರ ಮಗ, ಚಿಕ್ಕಂದಿನಲ್ಲಿ ಮನೆಬಿಟ್ಟು ಏಕಾಂಗಿಯಾಗಿ ಊರೂರು ಸಂಚರಿಸಿ, ಅಪಾರ ಲೋಕಾನುಭವ ಪಡೆದ ಜಾತ್ಯಾತೀತ ವ್ಯಕ್ತಿ. ಆಶುಕವಿ, ಸಮಾಜ ಚಿಕಿತ್ಸಕ ಎಂದೂ ಪ್ರಸಿದ್ಧಿ. | 2 |
| 57 | ಸೌದಾಮಿನಿ – ಮಿಂಚು | 1 |

| | | |
|---|---|---|
| | ಗೋಣು – ಕುತ್ತಿಗೆ<br><br>ಚೋದ್ಯ – ಆಶ್ಚರ್ಯ | 1<br><br>1 |
| 58 | ಭೂಮಿ = ಇಳೆ  ಅವನಿ, ಧರೆ, ಪೃಥ್ವಿ<br><br>ಕೋಪ = ಸಿಟ್ಟು , ಆಕ್ರೋಶ, ಮುನಿಸು<br><br>ತಾಯಿ = ಅಮ್ಮ, ಜನನಿ, ಮಾತೆ | 1<br><br>1<br><br>1 |
| 59 | ನೆರೆ = ಪಕ್ಕ, ಗುಂಪುಗೂಡು, ಪ್ರವಾಹ<br><br>ವರ = ಶ್ರೇಷ್ಠ, ಮದುಮಗ, ಅನುಗ್ರಹ<br><br>ಗಂಡ = ಪತಿ, ಅಪಾಯ, ಕೆನ್ನೆ | 1<br><br>1<br><br>1 |
| 60 | ಸುರ **x** ಅಸುರ<br><br>ಆಧಾರ **x** ನಿರಾಧಾರ<br><br>ಹಿಗ್ಗು **x** ಕುಗ್ಗು | 1<br><br>1<br><br>1 |
| 61 | ಸಗ್ಗ– ಸ್ವರ್ಗ<br><br>ಸುಖ – ಸೊಗ<br><br>ಹರಣ – ಪ್ರಾಣ | 1<br><br>1<br><br>1 |
| 62 | ಗುಣಾಭರಣ  = ಗುಣ + ಆಭರಣ<br><br>ಕೀಳುಗಬ್ಬುನ = ಕೀಳು + ಕಬ್ಬುನ<br><br>ಕಲ್ಲಿನಂತಿಪ್ಪ = ಕಲ್ಲಿನಂತೆ + ಇಪ್ಪ | 1<br><br>1<br><br>1 |
| 63 | ಈ ನುಡಿಗಟ್ಟುಗಳನ್ನು ಬಳಸಿ ಅರ್ಥವತ್ತಾದ ಸ್ವಂತ ವಾಕ್ಯಗಳನ್ನು ರಚಿಸಬೇಕು | 3 |
| 64 | ಬೇಗಬೇಗ, ಕೇಳುಕೇಳು<br><br>ತುತ್ತತುದಿ, ನಟ್ಟನಡವೆ---- ಇತ್ಯಾದಿ | 2 |
| 65 | 4 \| 4 \| 4<br>– – \| – U U \| – U U<br>ಆನೀ \| ಲಾಂಜನೆ \| ಯಿಂದೆಮ<br><br>4 \| 4 \| 4 \| 4 \| 4<br>– U U \| – U U \| U – U \| – U U \| U U –<br>ನೋನಯ \| ನೋದಿತ \| ವಿಮೋಹ \| ದಿಂದರೆ \| ಸಭೆವಿ<br><br>4 \| 4 \| 4<br>– U U \| U U U U \| – –<br>ದ್ಯಾನಿಳ \| ಯನ ರಿದ \| ದಂದೇ | 4 |

| | | |
|---|---|---|
| | 4 \| 4 \| 4 \| 4 \| 4<br>— — \| U U — \| U — U \| — — \| — —<br>ಹಾನಿ \| ತ್ಯತೆಗಿಂ \| ತುನಾಡೆ \| ಚೋದ್ಯಂ \| ಬಟ್ಟಂ<br>ಕಂದಪದ್ಯ | |
| 66 | 4 \| 4 \| 4 \| 4<br>— — \| U U U U \| U U — \| — U U<br>ತೂಗಾ \| ಡುತೆಮಡ \| ಕೆಗಳಂ \| ಬಾರಿಸಿ<br>4 \| 4 \| 4 \| 4<br>— — \| — — \| — U U \| — U U<br>ಜೋಗಂ \| ಬೋಗು \| ತ್ತಂನೆರೆ \| ಬಾರಿಸಿ<br>ಮಂದಾನಿಲ ರಗಳೆ | 4 |
| 67 | 3 \| 4 \| 3 \| 4<br>— U \| — U U \| U U U \| — U U<br>ಕಾಮ \| ವೆತ್ತಲು \| ಪರಮ \| ತತ್ತ್ವದ<br>3 \| 4 \| 3 \| 4<br>— U \| — U U \| U U U \| — U U<br>ಸೀಮೆ \| ಯೆತ್ತಲು \| ತಿಮಿರ \| ವೆತ್ತಲು<br>3 \| 4 \| 3 \| 4 \| 3 \| 4 \| 2<br>— U \| U U U U \| — U \| U U U U \| — U \| U U — \| —<br>ತಾಮ \| ರಸಸಖ \| ನೆತ್ತ \| ಲರಿಸಿನ \| ವೆತ್ತ \| ಬಿಸಿಲೆ \| ತ್ತ<br>–ಭಾಮಿನಿ ಷಟ್ಪದಿ | 4 |
| 68 | ಅಲಂಕಾರ : ಉಪಮಾಲಂಕಾರ<br>ಉಪಮೇಯ : ಸೀತೆಯ ಮುಖ<br>ಉಪಮಾನ : ಕಮಲ<br>ಉಪಮಾ ವಾಚಕ : ಅಂತೆ<br>ಸಮಾನ ಧರ್ಮ : ಅರಳುವುದು<br>ಸಮನ್ವಯ : ಉಪಮೇಯವಾದ ಸೀತೆಯ ಮುಖವನ್ನು<br>ಉಪಮಾನವಾದ ಕಮಲಕ್ಕೆ<br>ಉಪಮಾವಾಚಕ ವಾದ ಅಂತೆ ಎಂಬುದರ<br>ಮೂಲಕ ಪರಸ್ಪರ ಹೋಲಿಸಿದೆ | 4 |
| 69 | ಎರಡು ಅಕ್ಷರ ಅಥವಾ ಪದಗಳು ಪಧ್ಯದ ಸಾಲುಗಳಲ್ಲಿ ಪುನರಾವರ್ತಿತವಾಗುವುದು ಛೇಕಾನುಪ್ರಾಸ. ಪ್ರಸ್ತುತ ಉದಾಹರಣೆಗಳಲ್ಲಿ ಉಗುಳಿ, ಹಾಡಿ ಎಂಬ ಶಬ್ದಗಳು | 4 |

| | | |
|---|---|---|
| | ಪುನರಾವರ್ತನೆಗೊಂಡಿವೆ. | |
| 70 | ದಿನಪ (ಸೂರ್ಯ) ದಿನವೂ ಉದಯಿಸುವುದು ಸಹಜ. ಇಲ್ಲಿ ಯುದ್ಧವನ್ನು ನೋಡಲೆಂದು ಸೂರ್ಯ ಉದಯಿಸಿದ್ದಾನೆ ಎಂಬುದು ಉತ್ಪ್ರೇಕ್ಷೆ. ಆದ್ದರಿಂದ ಇದು ಉತ್ಪ್ರೇಕ್ಷಾಲಂಕಾರ. | 4 |
| 71 | ಪಂಪ – ಆದಿಪುರಾಣ – ಪೊಸಯಿಸಿದಳಾಕೆ ನಾಟ್ಯಗಮಮಂ– ಆದಿದೇವನ ಪರಿನಿಷ್ಕ್ರಮಣ ಕಲ್ಯಾಣದ ಸಂಭ್ರಮಾಚರಣೆಗೆಂದು ಇಂದ್ರ ಏರ್ಪಡಿಸಿದ್ದ ನೃತ್ಯ ಕಾರ್ಯಕ್ರಮಕ್ಕೆ ಆಗಮಿಸಿದ್ದ ವಿಶೇಷ ಪ್ರೇಕ್ಷಕರ ಬಗ್ಗೆ ತಿಳಿಸುತ್ತಾ.<br>ಅನುವಾದ :<br>ಕೆಲವು ಪ್ರಸಿದ್ಧರಾದ ನಾಯಕರು, ಕಿರೀಟಧಾರಿಗಳಾಗಿದ್ದ ಅರಸರು ತಮಗೆ ಯೋಗ್ಯವಾದ ಸ್ಥಳದಲ್ಲಿದ್ದ ಆಸನಗಳಲ್ಲಿ ಕುಳಿತು ಸಭೆ ನಡೆಸುತ್ತಿದ್ದರು. ಅಷ್ಟರಲ್ಲಿ ಆದಿದೇವನ ಪರಿನಿಷ್ಕ್ರಮಣ ಕಲ್ಯಾಣವು ಅತ್ಯಂತ ಸಮೀಪದಲ್ಲಿದೆ ಎಂಬುದನ್ನು ತನ್ನ ದಿವ್ಯಜ್ಞಾನದಿಂದ ತಿಳಿದ ಇಂದ್ರನು ಸಂಗೀತ ಕಾರ್ಯಕ್ರಮದ ಮೂಲಕ ಸಂತೋಷ ಪಡಿಸಲೆಂದು (ಬಂದನು) | 4 |
| 72 | ಷಡಕ್ಷರ ದೇವ – ಸೌಜನ್ಯ ವಿದೂರನಾದೆನ್– ಚಂಪೂಕಾವ್ಯ ಭಾಗ ಅರ್ಜುನನು ಶಿವನಿಂದ ಪಾಶುಪತಾಸ್ತ್ರವನ್ನು ಪಡೆಯಲೆಂದು ಇಂದ್ರಕೀಲ ಪರ್ವತದಲ್ಲಿ ತಪೋನಿರತನಾಗಿರುತ್ತಾನೆ. ಇವನ ಭಕ್ತಿ ಪರೀಕ್ಷೆಗಾಗಿ ಶಿವನು ಕಿರಾತ ವೇಷಧಾರಿಯಾಗಿ ಭೂತ ಗಣಗಳೊಂದಿಗೆ ಅಲ್ಲಿಗೆ ಬಂದು ಕಾಡು ಹಂದಿಯೊಂದನ್ನು ಘಾಸಿಗೊಳಿಸಿ, ಬೆನ್ನಟ್ಟಿ ಬರುತ್ತಾರೆ. ಅರ್ಜುನ ತಪೋಭಂಗಿತನಾಗಿ ಅಬ್ಬರಿಸುತ್ತಾ, ಬಾಣದಿಂದ ಹಂದಿಯನ್ನು ಹೊಡೆದುರುಳಿಸುತ್ತಾನೆ ಅಷ್ಟರಲ್ಲಿ<br>ಅನುವಾದ :<br>ಶಂಕರನು ವೇಗದಿಂದ ಅಲ್ಲಿಗೆ ಬಂದು, ಈ ಹಂದಿ ನಮ್ಮದು, ನಾನು ಕೊಂದೆನು, ಇದನ್ನು ಎತ್ತಿಕೊಳ್ಳಿ ಎಂದು ತನ್ನ ಭೂತಗಣಕ್ಕೆ ಹೇಳಿದನು. ಈ ಮಾತನ್ನು ಆಲಿಸಿದ ಅರ್ಜುನನು – ಇದು ನನ್ನ ಬಾಣದಿಂದ ಸತ್ತು ಬಿದ್ದಿತು, ದೂರ ಸರಿ, ಬಿಡು ಎಂದು ಶಿವನನ್ನು ತಳ್ಳಿ ಕೆರಳಿಸಿದನು. ಅವನು ಈಶ್ವರನೆಂದು ಆತನಿಗೆ ಹೇಗೆ ತಾನೆ ತಿಳಿಯಬೇಕು? | 4 |